Govt. of Karnataka [C.R.P. 67

Deposition
Sheets
(R.P. No. 57)
Form No. 4
(Criminal)

**ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ, ಮಧುಗಿರಿ**

ಪ್ರಕರಣ ಸಂಖ್ಯೆ: **2372/2023**

| ದಿನಾಂಕಃ **19-12-2025** ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಭೋದಿಸಲಾಯಿತು. | | | |
|---|---|---|---|
| ಸಿಡಬ್ಲ್ಯೂಃ | 6 | ಪಿಡಬ್ಲ್ಯೂ | 4 |
| ಹೆಸರು | ರಾಮಮೂರ್ತಿ ಎಸ್ | | |
| ತಂದೆ / ಗಂಡನ ಹೆಸರು | ಸಂಜೀವಯ್ಯ | | |
| ವಯಸ್ಸು | 42 | | |
| ಉದ್ಯೋಗ | ಅಬಕಾರಿ ನಿರೀಕ್ಷಕರು | | |
| ವಾಸ | ಮಧುಗಿರಿ | | |

ಮುಖ್ಯ ವಿಚಾರಣೆಃ ಎ ಪಿ ಪಿ ರವರಿಂದಃ

ಮಾರ್ಚ್-2021 ರಿಂದ ಮೇ-2025 ರವರೆಗೆ ನಾನು ಮಧುಗಿರಿ ಅಬಕಾರಿ ವಲಯ ಕಛೇರಿಯಲ್ಲಿ, ಅಬಕಾರಿ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ಈ ಪ್ರಕರಣದ ಕಡತವನ್ನು ಚಾಸಾ 5 ರವರಿಂದ ಪಡೆದು ತನಿಖೆಯನ್ನು ಮುಂದುವರೆಸಿರುತ್ತೇನೆ. ದಿಃ 19-05-2023 ರಂದು ಈ ಪ್ರಕರಣದಲ್ಲಿ ವಶಕ್ಕೆ ತೆಗೆದುಕೊಂಡು ಮು.ಮಾ ಗಳನ್ನು ಎಫ್ ಎಸ್ ಎಲ್ ಗೆ ಕಳುಹಿಸಿರುತ್ತೇನೆ. ದಿಃ 02.06.2023 ರಂದು ರಾಸಾಯನಿಕ ವರದಿ ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ.

ದಿಃ 02-06-2023 ರಂದು ವಾಸದ ಮಾಲೀಕತ್ವದ ಮಾಹಿತಿ ಕೋರಿ ಮುದ್ದೇನಹಳ್ಳಿ ಗ್ರಾಮಪಂಚಾಯ್ತಿ ಅಧಿಕಾರಿ ಪಿ.ಡಿ.ಒ ರವರಿಗೆ ಪತ್ರ ಬರೆದಿರುತ್ತೇನೆ. ದಿಃ 11.06.2023 ರಂದು ವಾಸದ ಮನೆಯ ಮಾಲೀಕತ್ವದ ಬಗ್ಗೆ ಮಾಹಿತಿಯನ್ನು ಪಡೆದುಕೊಂಡಿರುತ್ತೇನೆ . ಸದರಿ ಮನೆಯು ಆರೋಪಿ ತಂದೆ ಸಿದ್ದಪ್ಪ ಎಂದು ವರದಿ ನೀಡಿರುತ್ತಾರೆ. ವರದಿ ಜೊತೆಯಲ್ಲಿ ಟ್ಯಾಕ್ಸ್ ಡಿಮ್ಯಾಂಡ್ ಎಕ್ಸ್ ಟ್ರಾಕ್ಟ್ ನೀಡಿರುತ್ತಾರೆ. 15.06.2023 ರಂದು ಸದರಿ ಮಾಲೀಕರವರಿಗೆ ನೋಟೀಸ್ ನೀಡಿರುತ್ತೇವೆ.

ದಿಃ 19-06-2023 ರಂದು ಆರೋಪಿ ಹೇಳಿಕೆ ಪಡೆದುಕೊಂಡಿರುತ್ತೇನೆ. ದಿಃ 21.06.2023 ರಂದು ಮನೆಯ ಮಾಲೀಕರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ದಿಃ 25.07.2023 ರಂದು ಎಫ್ ಎಸ್ ಎಲ್ ನಿಂದ ವರದಿ ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ನಂತರ ತನಿಖೆಯನ್ನು ಪೂರ್ಣಗೊಳಿಸಿ ದಿಃ 25.07.2023 ರಂದು ಆರೋಪಿ ವಿರುದ್ಧ ದೋಷಾರೋಪಣ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

ಸಾಕ್ಷಿಯು ಎಫ್ ಎಸ್ ಎಲ್ ಗೆ ಕಳುಹಿಸಿದ ಪತ್ರ ವನ್ನು ನೋಡಿ ಗುರ್ತಿಸಿದ್ದು ಅದನ್ನು ನಿಪಿ-5 ಎಂದು, ಸಾಕ್ಷಿ ಯ ಸಹಿಯನ್ನು ನಿಪಿ-5(ಎ) ಗುರುತಿಸಲಾಯಿತು. ಸಾಕ್ಷಿಯು ಎಫ್ ಎಸ್ ಎಲ್ ವರದಿಯನ್ನು ನೋಡಿ ಗುರ್ತಿಸಿದ್ದು ಅದನ್ನು ನಿಪಿ-6 ಎಂದು, ಸಾಕ್ಷಿಯ ಸಹಿಯನ್ನು ನಿಪಿ-6(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಗ್ರಾಮಪಂಚಾಯ್ತಿ ಅಧಿಕಾರಿ ಪಿಡಿಒ ರವರಿಗೆ ಪತ್ರ ಬರೆದಿದ್ದು ಅದನ್ನು ನಿಪಿ- 7 ಎಂದು ಸಾಕ್ಷಿಯ ಸಹಿ ನಿಪಿ-7(ಎ) ಎಂದು, ಸಾಕ್ಷಿಯು ಮುದ್ದೇನಹಳ್ಳಿ ಗ್ರಾಮಪಂಚಾಯ್ತಿ ಅಧಿಕಾರಿಯವರು ನೀಡಿದ ವರದಿ ನೋಡಿ ಗುರ್ತಿಸಿದ್ದು ಅದನ್ನು ನಿಪಿ-8 ಎಂದು ಗುರುತಿಸಲಾಯಿತು. ಸಾಕ್ಷಿಯು ಟ್ಯಾಕ್ಸ್ ಡಿಮ್ಯಾಂಡ್ ರಿಜಿಸ್ಟರ್ ನ್ನು ನೋಡಿ ಗುರ್ತಿಸಿದ್ದು ಅದನ್ನು ನಿಪಿ-9 ಎಂದು, ಸಾಕ್ಷಿಯ ಸಹಿಯನ್ನು ನಿಪಿ-9(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಸಿದ್ದಗಂಗಪ್ಪನವರಿಗೆ ನೀಡಿರುವ ನೋಟೀಸ್ ನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-10 ಎಂದು ಸಾಕ್ಷಿಯ ಸಹಿಯನ್ನು ನಿಪಿ-10(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಕೃತ್ಯನಡೆದ ಸ್ಥಳದ ಮಾಲೀಕರಿಗೆ ನೀಡಿರುವ ನೋಟಿಸ್ ನೀಡಿ ಅವರ ಹೇಳಿಕೆ ಪಡೆದಿದ್ದು ಅದನ್ನು ನಿಪಿ 11 ಎಂದು, ಸಾಕ್ಷಿಯ ಸಹಿಯನ್ನು ನಿಪಿ 11(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಮು.ಮಾ ನೋಡಿ ಗುರ್ತಿಸಿದ್ದು ಅವುಗಳನ್ನು ಒಟ್ಟಾಗಿ ಎಂ ಒ-1 ಎಂದು ಗುರುತಿಸಲಾಯಿತು.

ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ     ವಕೀಲರಿಂದಃ</u>

ನಾನು ಎಫ್ ಎಸ್ ಎಲ್ ಕಳುಹಿಸಿದ ಮು. ಮಾಲುಗಳ ಬ್ಯಾಚ್ ನಂಬರ್, ಸೀರಿಯಲ್ ನಂಬರ್ ಮತ್ತು ಉತ್ಪಾದನಾ ದಿನಾಂಕವನ್ನು ಪತ್ರದಲ್ಲಿ ನಮೂದಿಸಿರುವುದಿಲ್ಲ. ನಾನು ಈ ಪ್ರಕರಣದ ಕಡತ ಪಡೆದ ನಂತರ ಕೃತ್ಯ ನಡೆದ ಸ್ಥಳಕ್ಕೆ ದಿಃ 15.06.2023 ರಂದು ಬೇಟಿ ನೀಡಿರುತ್ತೇನೆ. ಕೃತ್ಯ ನಡೆದ ಸ್ಥಳ ಆರೋಪಿಗೆ ಸೇರಿದ್ದಲ್ಲ ಎಂದರೆ ಸರಿ. ಆರೋಪಿ ತಂದೆಗೆ ಸೇರಿದ್ದು ಎಂದು ಉತ್ತರಿಸುತ್ತಾರೆ. ಪ್ಲಾಸ್ಟಿಕ್ ಚೀಲವನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುವುದಿಲ್ಲ. ನಾನು ಸ್ಥಳ ಹೋಗಿಲ್ಲ, ಮನೆಯ ಮಾಲೀಕರ ವರದಿ ತೆಗೆದುಕೊಂಡಿಲ್ಲ, ಆರೋಪಿಗೆ ತೊಂದರೆ ಸುಳ್ಳು ದೋಷಾರೋಪಣ ಪಟ್ಟಿ ತಯಾರಿಸಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಮೇಲಾಧಿಕಾರಿಗಳು ಮಾತನ್ನು ಕೇಳಿಕೊಂಡು ಸುಳ್ಳು ಪ್ರಕರಣ ದಾಖಲು ಮಾಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗೊಳಿಸಿ ಪ್ರಿಂಟ್ ತೆರೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಮ್.ಎಫ್.ಸಿ. ಮಧುಗಿರಿ.